ಆದ ಗಂಡನಿಗೆ ಅವನ ಹೆತ್ತವರ ಜವಾಬ್ದಾರಿಯೂ ಇತ್ತು. ಹೀಗಾಗಿ ಗಂಡನಿಗೆ ಹೆಗಲೆಣೆಯಾಗಲು ಇವಳು 'ನಮ್ಮನೆಯವ್ರು ಬೇಡಂತೇಳ್ರು' ಈ ಕೆಲಸಕ್ಕೆ ಸೇರಿಕೊಂಡಿದ್ದಳು. 'ನಂಗೆ ಎರಡು ಮಕ್ಕ. ಅಖ್ಖೆರಿಲಿ ಹುಟ್ಟಿದೋನ್‌ಗೆ ಹೈಸ್ಕೂಲ್ ಓದ್ವ ಹಾಂಗೆ ಮಠದಲ್ ಏರ್ಪಾಡ್ ಮಾಡಿದ್ದೊ' ಅನ್ನುತ್ತಿದ್ದ ಈಕೆ ದುಡಿದು ತಿನ್ನುವ ಯಾವ ಕೆಲಸವೂ ಹೀನವಲ್ಲವೆಂದು ಕಲ್ಯಾಣದ ಶರಣೆಯರ ಥರ ಕಾಯಕದ ಮಹಿಮೆ ಹೇಳುವ ಅನುಭಾವಿಯಾಗಿದ್ದಳು.

ನಂತರ ಬಂದವಳು ಕಲ್ಬುರ್ಗಿ ಕಡೆಯ ದೇವಿಕಾ. 'ಹೋಯಿಂದ್ರಿ ಅವ್ವ. ನಾ ಡೈಪರ ಸರೀ ಹಾಕಾಕಿಲ್ಲ ಅಂತ ನಿಮ್ಮತ್ತಿ ಜುಲುಮಿ ಮಾಡ್ತರ್ರಿ. ಹಿಂತಾ ಜುಲುಮಿ ಮುಂದ್ ಬರ್ಬಾರ್ದು ಅಂದ್ರ ನೀವೇ ಜರಾ ನೋಡ್ಕನ್ರಿ' ಅನ್ನುತ್ತಾ ನನ್ನನ್ನು ಸಾಕ್ಷೀದಾರಳನ್ನಾಗಿ ಮಾಡುತ್ತಿದ್ದಳು. ಇವಳದ್ದಂತೂ ಹೇಳಲಾಗದ ಕಥೆ. ತೆಳ್ಳಗೇ ಬಳ್ಳಿಯಂತಿದ್ದ ಈಕೆ ಅಂತರ್ಜಾತಿ ವಿವಾಹವಾಗಿ ತವರಿನಿಂದ ತಿರಸ್ಕೃತಳಾದವಳು. ಮಹಾ ಸಂಶಯ ಪಿಶಾಚಿಯಾದ ಗಂಡ ಈಕೆಯನ್ನು ಹೊರಗೆಲ್ಲೂ ಹೋಗಗೊಡುತ್ತಿರಲಿಲ್ಲ. ಸಾಲದ್ದಕ್ಕೆ ಮಕ್ಕಳೆರಡೂ ಹೆಣ್ಣಾಗಿ ಹುಟ್ಟಿದ್ದಕ್ಕೆ ಹೆಂಡತಿಯನ್ನೇ ಕಾರಣ ಮಾಡಿ ಹೊಡೆದು ಬಡಿದು ಹಿಂಸಿಸುತ್ತಿದ್ದ. ಆ ದೈತ್ಯದೇಹದ ದಬ್ಬಾಳಿಕೆಯನ್ನು ಸಹಿಸಲಾಗದೇ ಯಾರಿಗೂ ಹೇಳದೇ ಮಕ್ಕಳೆರಡನ್ನೂ ಅನಾಥಾಶ್ರಮದಲ್ಲಿ ಬಿಟ್ಟು ಈ ಕೆಲಸಕ್ಕೆ ಸೇರಿಕೊಂಡವಳು ದೇವಿಕಾ. ಹಾಗೆಯೇ ನಂತರ ಬಂದ ನಿಖಿತಾಳದ್ದು ಇನ್ನೊಂದೇ ಕಥೆ. ನಮ್ಮತ್ತೆ ಕೆಲರಾತ್ರಿ ಕಾಲು ನೋವಿನಿಂದ ನಿದ್ದೆ ಬರದೇ ಒದ್ದಾಡುತ್ತಿದ್ದರೆ 'ಲಾಗ್ಲಚ್ಚು ದೌಖಾನಿಯ ದಾಕ್ದಾರ ಕರ್ಕಾಬಂದು ಚೂಜಿ ಚುಚ್ಚಸ್ರೀ' ಅಂತ ಸಲಹೆ ನೀಡುವ ಈಕೆ ರಾಯಚೂರು ಕಡೆಯ ಭೂಪನೊಬ್ಬನ ಹೆಂಡತಿ. ಮದುವೆಯಾಗಿ ಎರಡು ವರ್ಷಗಳಾದರೂ ಮಾವನಿಂದ ವರದಕ್ಷಿಣೆ ಸಂದಾಯವಾಗದ ಕಾರಣ ಬಾಣಂತನಕ್ಕೆ ಬಂದ ಹೆಂಡತಿಯನ್ನು ತವರಲ್ಲೇ ಬಿಟ್ಟು ಪುನಃ ಆ ಕಡೆ ತಲೆ ಹಾಕಿರಲಿಲ್ಲ! ತನ್ನ ಮಗಳ ಅಪ್ಪನನ್ನು ಅಪಾರವಾಗಿ ಪ್ರೀತಿಸುವ ಈಕೆ ವರದಕ್ಷಿಣೆ ಹಣ ಹೊಂದಿಸಲು ಚಿಕ್ಕ ಮಗುವನ್ನು ತವರಲ್ಲಿ ಬಿಟ್ಟು ಈ ಕೆಲಸ ಆಯ್ದುಕೊಂಡಿದ್ದಳು.

ಮೊದಲೇ ಹೇಳಿದಂತೆ ಇಂತಿಪ್ಪ ಕಾಲದಲ್ಲಿ ಈ ಆಯಾಗಳು ಪದೇ ಪದೇ ರಜಾ ಹೋಗುವುದನ್ನು ತಪ್ಪಿಸಿದ್ದು ಕೋವಿಡ್-19 ಎಂಬ ಮಹಾಮಾರಿ! ನಮ್ಮೂರ ಕಡೆಯ ನೇತ್ರಾವತಿ ಎಂಬ ಗಟ್ಟಿಗಿತ್ತಿ ಆಕಸ್ಮಿಕವಾಗಿ ನಮ್ಮನೆಗೆ ಕಾಲಿಟ್ಟದ್ದು ಈ ಸಂಧಿಕಾಲದಲ್ಲೆ. ಗಾರೆ ಕೆಲಸದ ಗಂಡ ತನ್ನ ಸಂಪಾದನೆಯ ಜೊತೆಗೆ ಹೆಂಡತಿ ಅಲ್ಲಿ ಇಲ್ಲಿ ಕೂಲಿ ಮಾಡಿ ದುಡಿದದ್ದನ್ನೂ ಹೊಡೆದು ಬಡಿದು ಕಿತ್ತುಕೊಂಡು ಸುರೆಗೆ ಸುರಿದು ಮಜಾ ಮಾಡುವಾತ. ಎಷ್ಟೇ ತಿದ್ದಲು ಯತ್ನಿಸಿದರೂ ಆತ ಬಗ್ಗದ ಕಾರಣ ಮುಲಾಜಿಲ್ಲದೇ ಅವನಿಗೆ 'ಸೋಡ್ಚೀಟಿ' ಕೊಟ್ಟು ಪ್ರಾಥಮಿಕ ಶಾಲೆಗೆ ಹೋಗುವ ಮಗನನ್ನು ತವರಲ್ಲಿ ಬಿಟ್ಟು ಮೈಸೂರಿನ ಆಸ್ಪತ್ರೆಯೊಂದರಲ್ಲಿ ನರ್ಸ್ ಆಗಿದ್ದ ತಂಗಿಯ ಮನೆಗೆ ಬಂದಿದ್ದಳು. ಅಷ್ಟರಲ್ಲಿ ಹೇರಲಾದ ಲಾಕ್ಡೌನಿನಿಂದಾಗಿ ಊರಿಗೆ ಹಿಂದಿರುಗಲಾಗದೇ ಈ ಕೆಲಸಕ್ಕೆ ಸೇರಿಕೊಂಡಿದ್ದಳು. ಸುಮಾರು ಆರು ತಿಂಗಳಿಗೂ ಹೆಚ್ಚು ಕಾಲ ಈಕೆ ನಮ್ಮ ಜೊತೆಯಲ್ಲೇ ಗೃಹಬಂದಿಯಾಗಿದ್ದಳು. ಹುಟ್ಟೂರಿಗೆ ಹೋದಾಗಲೆಲ್ಲ ಕುಂದಗನ್ನಡ ಮಾತಾಡುವ ನನಗೆ, ಈಕೆ ಇಲ್ಲಿ ಸಿಕ್ಕಿದ್ದು ಕೆಲ ವರ್ಷಗಳ ಕಾಲ ಅಲ್ಲಿಗೆ ಹೋಗದ ನನ್ನ ನಾಸ್ಟಾಲ್ಜಿಕ್ ಭಾವನೆಯನ್ನು ಕೊಂಚ ದೂರ ಮಾಡಿತ್ತು. ಆದರೆ ನಮ್ಮತ್ತೆ ಮತ್ತು ಇವಳಿಗೆ ಪರಸ್ಪರರ ಮಾತುಗಳನ್ನು ಅರ್ಥೈಸಿಕೊಳ್ಳುವುದು ಕಷ್ಟವಾಗಿತ್ತು! ಒಮ್ಮೆ ನಮ್ಮತ್ತೆಯ ರೂಮಲ್ಲಿ ಜೋರಾದ ವಾದ ವಿವಾದ ಕೇಳಿ ಬಂದಾಗ ವಿಚಾರಿಸಲು ಹೋದರೆ 'ತುಂಡಾಯಿಲ್ಲೆ ಮಾರ್ರೆ, ಇಡಿಯಾಗಿತ್, ಇಲ್ಕಾಣಿ' ಅನ್ನುತ್ತ ನಮ್ಮತ್ತೆಯ ನೈಟಿಯನ್ನು ಅವರ ಕಣ್ಣೆದುರು ಹಿಡಿಯುತ್ತಿದ್ದಳು! ವಿಷಯ ಇಷ್ಟೆ- ಒಗೆದು ಒಗೆದು ನೈಟಿ ತುಂಡವಾಗಿದೆ ಅನ್ನುವ ಅವರ ಮಾತನ್ನು ಇವಳು 'ಕಟ್' ಆಗಿದೆ ಅಂತ ಅರ್ಥೈಸಿದ್ದಳು! ಕೊನೆಗೆ ತುಂಡ ಅಂದರೆ ಗಿಡ್ಡ, ಕುಳ್ಳ ಅನ್ನುವುದನ್ನು ತಿಳಿಸಿ ಹೇಳಿದ್ದಾಯ್ತು. ಮಾತ್ರವಲ್ಲ, ಈಕೆ 'ಇವತ್ತೀವ್ ಮಂಡಿ ಮೀಯೂದಲ್ದ ಮಾರ್ರೆ, ಬಚ್ಲಿಗ್ ಬೇಗ್ ಹೋಪ' ಅನ್ನುತ್ತ ಅವರ ತಲೆಸ್ನಾನವನ್ನು ಜ್ಞಾಪಿಸಿದರೆ ಅರ್ಥವಾಗದೇ ಪಿಳಿಪಿಳಿ ಕಣ್ಣು ಬಿಡುತ್ತಿದ್ದರು ಅತ್ತೆ. ಜೊತೆಗೆ ಅದರ ರೂಪಾಂತರ ಮಾಡುವುದಲ್ಲದೇ ಮಾತು ಮಾತಿಗೂ ನೇತ್ರ, 'ಆಯ್ತಾಯ್ತ್' ಅಂತ ಒಪ್ಪಿಗೆಯ ರುಜು ಹಾಕಿದಾಗೆಲ್ಲ 'ಪದೇ ಪದೇ ಅದೇನ್ ಒಗ್ಗರಣೆ ನಿಂದು' ಅಂತ ಅವರು ರೇಗುತ್ತಿದ್ದರು. 'ಅದು ನಮ್ಮೂರಿನ ನುಡಿಗಟ್ಟು